ಪಿ.ಡಬ್ಲೂ 1

ದಿನಾಂಕ : 28-09-2018

ಸಾಕ್ಷಿಯನ್ನು ದಿಃ 28-09-2018 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ ಶ್ರೀ ಕೆ.ಎಂ, ರವರಿಂದ :

ನನ್ನ ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿನ ವಿಷಯಗಳೆಲ್ಲವು ಸತ್ಯವಾಗಿರುತ್ತದೆ.

ನಾನು ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. 1 ರಿಂದ 5ನೇ ಪ್ರತಿವಾದಿಯರು ಸ್ವತ್ತಿಗೆ ಸಂಬಂಧಿಸಿದಂತೆ ಬರೆದು ಕೊಟ್ಟಿರುವ ನೋಂದಾಯಿತ ಕರಾರುಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು, ನಿಪಿ 1 ರಲ್ಲಿ ಸಾಕ್ಷಿಯು 1 ರಿಂದ 5ನೇ ಪ್ರತಿವಾದಿಯರು ಸಹಿಗಳು ಇದೆ ಎಂದು ಗುರುತಿಸಿದ್ದು ಅವುಗಳನ್ನು ನಿಪಿ 1ಎ ಯಿಂದ ನಿಪಿ 1ಇ ಎಂದು ಗುರುತಿಸಲಾಯಿತು. ಸದರಿ ದಾಖಲೆಲಯಲ್ಲಿ ತನ್ನ ಸಹಿ ಇದೆಯೆಂದು ಸಾಕ್ಷಿಯು ಗುರುತಿಸಿದ್ದು ಅದನ್ನು ನಿಪಿ 1ಎಫ್ ಎಂದು ಗುರುತಿಸಲಾಯಿತು. ಸದರಿಯವರುಗಳು ಮತ್ತು ನಾನು ಸದರಿ ದಾಖಲೆಯ ಪ್ರತಿಪುಟಗಳಲ್ಲೂ ಸಹಿ ಮಾಡಿರುತ್ತೇವೆ. ಸದರಿ ಪತ್ರಕ್ಕೆ ಸಾಕ್ಷಿದಾರರಾಗಿ ಜಯಪ್ಪ ಮತ್ತು ಐ.ಆರ್. ಪರಶುರಾಮ್ ಎನ್ನುವವರು ಸಹಿ ಮಾಡಿರುತ್ತಾರೆ ಎಂದು ಸಾಕ್ಷಿಯು ಅವರುಗಳ ಸಹಿ ನಿಪಿ 1 ರಲ್ಲಿ ಇದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಕೆ.ಎಂ. ರೇವಣಸಿದ್ದಯ್ಯ ಎನ್ನುವವರು ತಯಾರಿಸಿದ್ದು ಸದರಿಯವರು ಸಹ ಸಹಿ ಮಾಡಿರುತ್ತಾರೆ. ದಾವಾ ಸ್ವತ್ತು 1 ಮತ್ತು 2ನೇ ಪ್ರತಿವಾದಿಗಳ ಹೆಸರಿನಲ್ಲಿ ಇದೆ ಎನ್ನುವುದಕ್ಕೆ ಪಹಣಿ ಪತ್ರಿಕೆಗಳ ದೃಢೀಕೃತ ನಕಲುಗಳನ್ನು ಹಾಜರಪಡಿಸಿದ್ದು ಅದನ್ನು 2 ಎಂದು, ದಿಃ 23-09-2016 ರಂದು ವಕೀಲರ ಮೂಲಕ ಪ್ರತಿವಾದಿರಿಗೆ ಕಳುಹಿಸಿದ ಲೀಗಲ್ ನೋಟಿಸ್‌ನ ಕಛೇರಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 3 ಎಂದು, ಸದರಿ ನೋಟಿಸನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಿದ ಬಗ್ಗೆ ಐದು ಅಂಚೆ ರಶೀದಿಗಳನ್ನು ಹಾಜರಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 4 ಎಂದು, 1ನೇ ಪ್ರತಿವಾದಿಗೆ ಕಳುಹಿಸಿದ ನೋಟಿಸ್ ಆತನು ತೆಗೆದುಕೊಳ್ಳದೇ ಹಿಂದಿರುಗಿದ ಬಗ್ಗೆ ಅಂಚೆ ಲಕೋಟೆಯನ್ನು ನಿಪಿ 5 ಸದರಿ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯಲ್ಲಿ ತೆರೆಯಲಾಗಿದ್ದು ಅದರಲಿಲ್ಲದ್ದ ನೋಟಿಸ್ ಪ್ರತಿಯನ್ನು ನಿಪಿ 5ಎ ಎಂದು, 2ನೇ ಪ್ರತಿವಾದಿಗೆ ಕಳುಹಿಸಿದ ನೋಟಿಸ್ ಆತನಿಗೆ ಜಾರಿಯಾಗದೇ ಹಿಂದಿರುಗಿದ ಬಗ್ಗೆ ಅಂಚೆ ಲಕೋಟೆಯನ್ನು ಹಾಜರುಪಡಿಸಿದ್ದು ನಿಪಿ 6 ಸದರಿ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯಲ್ಲಿ ತೆರೆಯಲಾಗಿದ್ದು ಅದರಲ್ಲಿದ್ದ ನೋಟಿಸ್ ಪ್ರತಿಯನ್ನು ನಿಪಿ 6ಎ ಎಂದು, 3ನೇ ಪ್ರತಿವಾದಿಗೆ ಕಳುಹಿಸಿದ ನೋಟಿಸ್ ಆಕೆಯು ತೆಗೆದುಕೊಳ್ಳದೇ ಹಿಂದಿರುಗಿದ ಬಗ್ಗೆ ಅಂಚೆ ಲಕೋಟೆಯನ್ನು ಹಾಜರುಪಡಿಸಿದ್ದು ನಿಪಿ 7 ಸದರಿ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯಲ್ಲಿ ತೆರೆಯಲಾಗಿದ್ದು ಅದರಲ್ಲಿದ್ದ ನೋಟಿಸ್ ಪ್ರತಿಯನ್ನು ನಿಪಿ 7ಎ ಎಂದು, 4ನೇ ಪ್ರತಿವಾದಿಗೆ ಕಳುಹಿಸಿದ ನೋಟಿಸ್ ಜಾರಿಯಾಗದೇ ಹಿಂದಿರುಗಿದ ಬಗ್ಗೆ ಅಂಚೆ ಲಕೋಟೆಯನ್ನು ಹಾಜರುಪಡಿಸಿದ್ದು ನಿಪಿ 8 ಸದರಿ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯಲ್ಲಿ ತೆರೆಯಲಾಗಿದ್ದು ಅದರಲ್ಲಿದ್ದ ನೋಟಿಸ್ ಪ್ರತಿಯನ್ನು ನಿಪಿ 8ಎ ಎಂದು, 5ನೇ ಪ್ರತಿವಾದಿಗೆ ಸದರಿ

ಪಿ.ಡಬ್ಲೂ 1

ದಿನಾಂಕ ಃ 28-09-2018

ನೋಟಿಸ್ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 9 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗಾಗಿ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿಯಿದೆ.

ಸಿವಿಲ್ ಜಡ್ಜ್ , ಹರಪನಹಳ್ಳಿ.